ಲಕ್ಷ ರೂಪಾಯಿಗಳ ಸಾಲದ ನೆರವನ್ನು ರಾಜ್ಯ ಸರ್ಕಾರವು ಒದಗಿಸಿತ್ತು. ಆದರೆ ಇಂದು ಆ ಸಾಲ ಬಡ್ಡಿ ಸಹಿತ 60 ಲಕ್ಷ ರೂಪಾಯಿ ಆಗಿದ್ದು, ರಾಷ್ಟ್ರದ ಪ್ರಮುಖ ಉದ್ಯಮಗಳಿಗೆ ಜಾಗ ತೆರವು ಮಾಡಿದ ಜನರ ತಲೆಯ ಮೇಲೆ ಸರ್ಕಾರದ ಸಾಲ ವಸೂಲಿಯ ನೋಟೀಸಿನ ಕತ್ತಿ ತೂಗುತ್ತಿದೆ. ನಿರ್ವಸಿತರಾದ ಇವರ ಮೇಲಿನ ಇಷ್ಟು ದೊಡ್ಡ ಹೊರೆಯನ್ನು ಸರ್ಕಾರ ತಕ್ಷಣ ಮನ್ನಾ ಮಾಡುವ ಕ್ರಮ ಕೈಗೊಳ್ಳಬೇಕು. ಕಳೆದ ಎರಡು ದಶಕಗಳಿಂದ ಎಲ್ಲಾ ವಿಧದಲ್ಲೂ ಸರ್ಕಾರಕ್ಕೂ ಹಾಗೂ ಮಂತ್ರಿಗಳಿಗೂ ಸಾರ್ವಜನಿಕರು ಹಲವು ಮನವಿಗಳನ್ನು ಸಲ್ಲಿಸಿದರೂ ಅದು ಕೇವಲ ಅರಣ್ಯ ರೋದನವಾಗಿದೆ. ಆದುದರಿಂದ ರಾಜ್ಯಸರ್ಕಾರ ಇನ್ನಾದರೂ ಪುನರ್ವಸತಿ ಪಡೆದ ನಿರ್ವಸಿತರು ತಾಳ್ಮೆ ಕಳೆದುಕೊಂಡು ಪ್ರತಿಭಟಿಸುವ ಪೂರ್ವದಲ್ಲಿ ಬಡ್ಡಿ ಮನ್ನಾ ಮಾಡುವ ಆದೇಶ ನೀಡಬೇಕೆಂದು ರಾಜ್ಯ ಸರ್ಕಾರವನ್ನು ಆಗ್ರಹಿಸುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) (ಸಹಕಾರ ಸಚಿವರ ಪರವಾಗಿ) : ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ತಾಲ್ಲೂಕು, ಸುರತ್ಕಲ್ ವಿಧಾನ ಸಭಾ ಕ್ಷೇತ್ರಕ್ಕೆ ಸೇರಿದ ಕಾಟಿಪಳ್ಳ ಗ್ರಾಮದಲ್ಲಿ ಪಣಂಬೂರು ವಿವಿಧೋದ್ದೇಶ ಸಹಕಾರ ಸಂಘವೂ ಇದೆ. ಸದರೀ ಸಂಘಕ್ಕೆ ನವ ಮಂಗಳೂರು ಬಂದರು ಯೋಜನೆ ಕಾರ್ಯರೂಪಕ್ಕೆ ಬಂದಾಗ ಅಲ್ಲಿ ನಿರ್ವಸಿತರಾದ ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸುವ ಉದ್ದೇಶದಿಂದ ಸಂಘವನ್ನು ದಿನಾಂಕ : 30-4-64ರಂದು ಸ್ಥಾಪನೆ ಮಾಡಲಾಗಿರುತ್ತದೆ. ಸದರೀ ಸಂಘಕ್ಕೆ 18.00 ಲಕ್ಷ ರೂ.ಸಾಲವನ್ನು ಕರ್ನಾಟಕ ಸರ್ಕಾರವು 1966, 1967 ಹಾಗೂ 1968ನೇ ಸಾಲುಗಳಲ್ಲಿ ಮಂಜೂರು ಮಾಡಿರುತ್ತದೆ. ಪ್ರತಿ ಸದಸ್ಯರಿಗೆ 500 ರೂ.ಗಳಿಂದ 3,000 ರೂ. ಗಳವರೆಗೆ ಒಟ್ಟು 671 ಸದಸ್ಯರಿಗೆ ಸಾಲವನ್ನು ಬಟವಾಡೆ ಮಾಡಲಾಗಿರುತ್ತದೆ. ಈ ಸಾಲದಲ್ಲಿ 16 ಜನ ಸದಸ್ಯರಿಂದ ಮಾತ್ರ ಪೂರ್ಣವಾಗಿ ಮರು ಪಾವತಿ ಮಾಡಿರುತ್ತಾರೆ. ಸದರೀ ಸಂಘವನ್ನು 27-5-1986 ರಂದು ಸಮಾಪನಗೊಳಿಸಲಾಗಿದೆ. ಸಂಘವು ಸರ್ಕಾರಕ್ಕೆ 31-7-91ಕ್ಕೆ 17.40 ಲಕ್ಷ ರೂ. ಅಸಲು ಹಾಗೂ 25.41 ಲಕ್ಷ ರೂ. ಬಡ್ಡಿ ಒಟ್ಟು 42.81 ಲಕ್ಷ ರೂ. ಪಾವತಿಸಬೇಕಾಗಿರುತ್ತದೆ. ಆದರೆ ದಿನಾಂಕ: 5-12-1977ರಲ್ಲಿ ಗ್ರಾಮೀಣ ಅಭಿವೃದ್ಧಿ ಮತ್ತು ಸಹಕಾರ ಇಲಾಖೆಯ ಆದೇಶ ಕ್ರಮ ಸಂಖ್ಯೆ : ಆರ್‌ಡಿಸಿ-132-ಸಿಎಂಎಂ-77-ಇದರಲ್ಲಿ ವಸೂಲಾತಿಗೆ ತಡೆಯಾಜ್ಞೆ ನೀಡಿದೆ. ಇದುವರೆವಿಗೂ 60,000 ರೂ. ಅಸಲು ಮತ್ತು ಬಡ್ಡಿ ವಸೂಲು ಮಾಡಿ ಪಾವತಿ ಮಾಡಲಾಗಿರುತ್ತದೆ. ಇದು ಕರ್ನಾಟಕ ಕೃಷಿ ಮತ್ತು ಗ್ರಾಮೀಣ ಸಂಪತ್ತು ವಿಮೋಚನಾ ಯೋಜನೆಯಡಿಯಲ್ಲಿ ಒಳಪಡುವುದಿಲ್ಲ.

2) ಸುಪ್ರಸಿದ್ಧ ಪ್ರವಾಸಿ ಕೇಂದ್ರವಾದ ಶ್ರೀರಂಗಪಟ್ಟಣದಲ್ಲಿ ಯಾತ್ರಿಕರ ನಿವಾಸವನ್ನು ನಿರ್ಮಿಸುವುದು.

SRI DAMAYANTHI BOREGOWDA: (SRIRANGAPATNA): I appreciate your press statement on tourism. Srirangapatna is a tourist centre visited by the maximum numbers of tourists. It was once the glorious capital of Karnataka now a neglected place with meragre facilities. It can be made a tourist paradise. The Mayura Cottages which are than beyond the reach of middle class tourists. Only the rich motorists can stay there and pay

Rs.165/ per day. Bus loads of tourists stay on the grounds of Sri Ranganathaswamy Temple. The women sleep in the buses and in the open grounds. Please see that rooms or dormitaries are built and given at reasonable rates to the torists. Therefore one Yatrik Nivas is neccessary.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು) (ಮಾನ್ಯ ವಾರ್ತಾ ಹಾಗೂ ಪ್ರವಾಸೋದ್ಯಮ ಸಚಿವರ ಪರವಾಗಿ) : ಶ್ರೀರಂಗಪಟ್ಟಣ ರಾಜ್ಯದ ಪ್ರಮುಖ ಪ್ರೇಕ್ಷಣೀಯ ಸ್ಥಳಗಳಲ್ಲಿ ಒಂದು ಮೈಸೂರಿನಿಂದ ಕೇವಲ 15 ಕಿ.ಮೀ. ದೂರದಲ್ಲಿರುವ ಶ್ರೀರಂಗಪಟ್ಟಣದಲ್ಲಿ ಪ್ರವಾಸೋದ್ಯಮ ಇಲಾಖೆ ಈಗಾಗಲೇ ನದೀ ತೀರದಲ್ಲಿ 3 ಜೋಡಿ ಕಾಟೇಜುಗಳನ್ನು ಹಾಗೂ ಉಪಹಾರ ಗೃಹವನ್ನು ಪ್ರವಾಸಿಗರ ಸೌಲಭ್ಯಕ್ಕಾಗಿ ನಿರ್ಮಿಸಿದೆ. ಇತ್ತೀಚೆಗೆ ಈ ಕುಠೀರಗಳಿಗೆ 3.00 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಎರಡು ಜೋಡಿ ಕಾಟೇಜುಗಳನ್ನು ಹೆಚ್ಚುವರಿ ಆಗಿ ಸೇರಿಸಲಾಗಿದೆ. ಈ ಸೌಲಭ್ಯವನ್ನು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ನಿರ್ವಹಿಸುತ್ತಿದೆ.

ಇದಲ್ಲದೆ ಶ್ರೀರಂಗನಾಥಸ್ವಾಮಿ ದೇವಾಲಯದ ಬಳಿ ಕೇಂದ್ರ ಸರ್ಕಾರದ ನೆರವಿನೊಡನೆ ರೂ. 6.30 ಲಕ್ಷ ವೆಚ್ಚದಲ್ಲಿ ಉಪಹಾರ ಗೃಹ ಮತ್ತು ಶೌಚಾಲಯ ಸೌಲಭ್ಯಗಳನ್ನು ಇತ್ತೀಚೆಗೆ ನಿರ್ಮಿಸಿ ನಿರ್ವಹಣೆಗಾಗಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮಕ್ಕೆ ವಹಿಸಲಾಗಿದೆ ಇಲ್ಲಿ ಇಲಾಖೆ ಒಂದು ಪ್ರವಾಸಿ ಮಾಹಿತಿ ಕೇಂದ್ರವನ್ನು ಸಹ ತೆರೆದಿದೆ.

ಶ್ರೀರಂಗಪಟ್ಟಣದಿಂದ ಸಮೀಪವಿರುವ ಮೈಸೂರಿನಲ್ಲಿ ಕೇಂದ್ರ ಸರ್ಕಾರದ ನೆರವಿನೊಂದಿಗೆ ರೂ. 51.02 ಲಕ್ಷ ಅಂದಾಜು ವೆಚ್ಚದಲ್ಲಿ ನಿರ್ಮಿಸುತ್ತಿರುವ ಯಾತ್ರಿ ನಿವಾಸ ಪೂರ್ಣಗೊಳ್ಳುವ ಹಂತದಲ್ಲಿದೆ. ಶ್ರೀರಂಗಪಟ್ಟಣಕ್ಕೆ ಭೇಟಿ ನೀಡುವ ಪ್ರವಾಸಿಗರು ಈ ಸೌಲಭ್ಯವನ್ನು ಉಪಯೋಗಿಸಬಹುದಾಗಿರುವುದರಿಂದ ಹಾಗೂ ಸಮೀಪದಲ್ಲೇ ಮತ್ತೊಂದು ಯಾತ್ರಿ ನಿವಾಸ ನಿರ್ಮಿಸಲು ಕೇಂದ್ರದ ನೆಲವು ದೊರೆಯಲು ಸಾಧ್ಯವಿಲ್ಲದಿರುವುದರಿಂದ ಶ್ರೀರಂಗಪಟ್ಟಣದಲ್ಲಿ ಯಾತ್ರಿ ನಿವಾಸ ನಿರ್ಮಿಸಲು ಸಾಧ್ಯವಾಗುವುದಿಲ್ಲ. ಶ್ರೀರಂಗಪಟ್ಟಣದಿಂದ 19 ಕಿ.ಮೀ. ದೂರದಲ್ಲಿರುವ ಕೃಷ್ಣರಾಜಸಾಗರದಲ್ಲಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ವಸತಿ ಗೃಹವನ್ನು ನಿರ್ವಹಿಸುತ್ತಿದೆ.

3) ಹಾಸನದ ಸಿಟಿ ಕೋ-ಆಪರೇಟಿವ್ ಬ್ಯಾಂಕಿನಲ್ಲಿ ಲಕ್ಷಾಂತರ ರೂಪಾಯಿಗಳ ಅವ್ಯವಹಾರ ನಡೆದಿರುವುದು.

ಶ್ರೀ ಕೆ.ಹೆಚ್. ಹನುಮೇಗೌಡ : ಸನ್ಮಾನ್ಯ ಸಭಾಧ್ಯಕ್ಷರೇ, ಹಾಸನ ಸಿಟಿ ಕೋ ಆಪರೇಟಿವ್ ಬ್ಯಾಂಕಿನಲ್ಲಿ ಲಕ್ಷಾಂತರ ರೂಪಾಯಿಗಳ ಅವ್ಯವಹಾರ ನಡೆದಿದ್ದು, ಸರ್ಕಾರ ಈ ಬ್ಯಾಂಕನ್ನು ಸೂಪರ್ ಸೀಡ್ ಮಾಡಿ 20 ದಿವಸಗಳ ಮೇಲಾಗಿದ್ದರೂ, ಹಾಸನದ ಡೆಪ್ಯುಟಿ ರಿಜಿಸ್ಟ್ರಾರ್‌ರವರು ಬ್ಯಾಂಕಿನ ಪೂರ್ತಾ ಚಾರ್ಜ್ ತೆಗೆದುಕೊಂಡಿಲ್ಲವೆಂದು ತಿಳಿದು ಬಂದೀದೆ. ಈಗಲೂ ಬ್ಯಾಂಕಿನ ಹಿಂದಲ ಮೇನೆಜರ್‌ರವರು (ಈಗ ಇವರನ್ನು ಸಸ್ಪೆಂಡ್ ಮಾಡಲಾಗಿದೆ) ರಿಕಾರ್ಡ್‌ಗಳನ್ನು ತಮ್ಮ ವಶದಲ್ಲಿಯೇ ಇಟ್ಟುಕೊಂಡು ಆಪಾದನೆಗಳಿರುವುದಾಗಿ ಫೈಲುಗಳನ್ನು ತಿದ್ದುತ್ತಿರುವುದಾಗಿ ತಿಳಿದು ಬಂದಿದೆ. ಹಾಸನ ಸಿಟಿ ಕೋ ಆಪರೇಟಿವ್ ಬ್ಯಾಂಕಿಗೆ ಒಬ್ಬ ಪೂರ್ವಾವಧಿ